GULBARGA UNIVERSITY
"Jnana Ganga", GULBARGA - 585 106, Karnataka, India
☎ 08472-263202
Fax: 08472-263206
E-Mail: root@guluni.kar.nic.in
Grams: UNIGUL

ಗುವಿಗು:ಪಜಾ/ಪಪಂ ಘಟಕ/ 2017–18/70

ದಿನಾಂಕ: 20-7-2012

## ಅಲ್ಪಾವಧಿ ಟೆಂಡರ ಅಧಿಸೂಚನೆ Second Call

ವಿಷಯ: 2017–18 ನೇ ಶೈಕ್ಷಣಿಕ ಸಾಲಿಗೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಆವರಣದಲ್ಲಿ ಬರುವ 04 ವಸತಿ ನಿಲಯಗಳಿಗೆ ಮತ್ತು ಸ್ನಾತಕೋತ್ತರ ಕೇಂದ್ರ ರಾಯಚೂರದಲ್ಲಿರುವ ಒಂದು ವಸತಿ ನಿಲಯಕ್ಕೆ ಊಟದ ವ್ಯವಸ್ಥೆ ಮಾಡುವ ಕುರಿತು.

ಉಲ್ಲೇಖ: 1 ಮಾನ್ಯ ಕುಲಪತಿಗಳ ಅನುಮೊದನೆ ದಿನಾಂಕ : 21.06.2017/19.07.2017.

– – –

ಮೇಲ್ಕಾಣಿಸಿರುವ ವಿಷಯ ಹಾಗೂ ಉಲ್ಲೇಖದ ಪ್ರಕಾರ 2017–18 ನೇ ಶೈಕ್ಷಣಿಕ ಸಾಲಿಗೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಆವರಣದಲ್ಲಿ ಬರುವ 04 ವಸತಿ ನಿಲಯಗಳಿಗೆ ಮತ್ತು ಸ್ನಾತಕೋತ್ತರ ಕೇಂದ್ರ ರಾಯಚೂರದಲ್ಲಿರುವ ಒಂದು ವಸತಿ ನಿಲಯಕ್ಕೆ ಊಟದ ವ್ಯವಸ್ಥೆ ಮಾಡಲು ಈ ಮೂಲಕ ಟೆಂಡರ ಕರೆಯಲಾಗಿದೆ. ಹೆಚ್ಚಿನ ಮಾಹಿತಿಗಾಗಿ ಸಂಬಂಧ ಪಟ್ಟ ಪ.ಜಾ/ಪ.ಪಂಗಡ ಘಟಕದ ನಿರ್ದೇಶಕರನ್ನು ಸಂಪರ್ಕಿಸಿ ಮಾಹಿತಿಯನ್ನು ಪಡೆಯಲು ಸೂಚಿಸಲಾಗಿದೆ. ಟೆಂಡರ ಸಲ್ಲಿಸಲು ಕೊನೆಯ ದಿನಾಂಕ : 05.08.2017 ಎಂದು ತಿಳಿಸಲಾಗಿದೆ. ನಂತರ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. (ದೂರವಾಣಿ ಸಂಖ್ಯೆ ಕಚೇರಿ: 08472–263202). ಇದಕ್ಕೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳಿಗಾಗಿ ವಿಶ್ವವಿದ್ಯಾಲಯದ ವೆಬಸೈಟ್ www.gulbargauniversity.kar.nic.in ರಲ್ಲಿ ಪಡೆಯಬಹುದು.

1. ಕೃಷ್ಣಾ ವಸತಿ ನಿಲಯ
2. ಡಾ.ಬಿ.ಆರ್. ಅಂಬೇಡ್ಕರ ವಸತಿ ನಿಲಯ
3. ಗಂಗಾ ವಸತಿನಿಲಯ
4. ವೃತ್ತಿ ನಿರತ ಮಹಿಳಾ ವಸತಿನಿಲಯ
5. ವಿದ್ಯಾರ್ಥಿಗಳ ವಸತಿ ನಿಲಯ ಸ್ನಾತಕೋತ್ತರ ಕೇಂದ್ರ ರಾಯಚೂರ

20/7/17

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

Comper Section,
G.V.K.

Annexure 'A'

ಅರ್ಜಿ ನಮೂನೆ

2017–18 ನೇ ಶೈಕ್ಷಣಿಕ ಸಾಲಿಗೆ ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಆವರಣದಲ್ಲಿ ಬರುವ 04 ವಸತಿ ನಿಲಯಗಳಿಗೆ ಮತ್ತು ಸ್ನಾತಕೋತ್ತರ ಕೇಂದ್ರ ರಾಯಚೂರದಲ್ಲಿರುವ ಒಂದು ವಸತಿ ನಿಲಯಕ್ಕೆ ಊಟದ ವ್ಯವಸ್ಥೆ ಮಾಡಬೇಕಾದ ವಿವರದ ಪಟ್ಟಿ.

| ಕ್ರ.ಸಂ. | ಊಟದ ವಿವರ | ಷರಾ |
|---|---|---|
| 1. | ಚಪಾತಿ / ರೊಟ್ಟಿ 3 | |
| 2. | ಅನ್ನ ಫುಲ್ (ಮದರ ಇಂಡಿಯಾ) | |
| 3. | ಎರಡು ವಿಧದ ಪಲ್ಲೆ ಮತ್ತು ಸಾರು | |
| 4. | ಮೊಸರು ಉಪ್ಪಿನಕಾಯಿ | |
| 5. | ಪ್ರತಿ ದಿನ ಎರಡು ಊಟ<br>ಒಂದು ಟಿಫಿನ್ | |
| 6. | ಪ್ರತಿ ತಿಂಗಳು ಕೊನೆಯ<br>ರವಿವಾರವಿಶೇಷ ಊಟ (ಸ್ವೀಟ್) | |

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

01/20/7/2017

**Annexure 'B'**

**ಊಟದ ಸರಬರಾಜು ಮಾಡುವಾಗ ಈ ಕೆಳಗಿನ ನಿಯಮಗಳನ್ನು ಪಾಲನೆಮಾಡತಕ್ಕದ್ದು.**

1. ಒಂದು ತಿಂಗಳಿಗೆ ಒಬ್ಬ ವಿದ್ಯಾರ್ಥಿಗೆ ರೂ.1500/–ರಂತೆ ಹಣ ಪಾವತಿಸಲಾಗುವುದು. ಮತ್ತು ವಿದ್ಯಾರ್ಥಿಗಳ ಪ್ರತಿದಿನದ ಊಟದ ಲೆಕ್ಕವಿಡಲು ಕೋರಲಾಗಿದೆ. ಅದನ್ನು ಪರಿಪಾಲಕರಿಗೆ ಒಪ್ಪಿಸಿ ಪ್ರತಿ ತಿಂಗಳು ಬಿಲ್ ಧೃಡೀಕರಿಸಿ ಪಜಾ/ಪಪಂ ಘಟಕ ಸಲ್ಲಿಸಬೇಕು.
2. ಊಟದ ಸ್ಯಾಂಪಲನ್ನು ಕೇಳಿದಾಗ ಕುಲಸಚಿವರ ಕಾರ್ಯಾಲಕ್ಕೆ ಸಲ್ಲಿಸತಕ್ಕದ್ದು.
3. ಊಟ ಒಳ್ಳೆಯ ಗುಣಮಟ್ಟ ಹೊಂದಿರತಕ್ಕದ್ದು. ಒಂದು ವೇಳೆ ಕಳಪೆ ದರ್ಜೆಯ ಊಟ ಸರಬರಾಜು ಮಾಡಿದಲ್ಲಿ ಒಪ್ಪಂದವನ್ನು ಸ್ಥಗಿತಗೊಳಿಸಲಾಗುವುದು. ಅದಕ್ಕೆ ತಗಲುವ ವೆಚ್ಚವನ್ನು ತಾವೇ ಭರಿಸಬೇಕಾಗುತ್ತದೆ.
4. ಟೆಂಡರ ಅವಧಿಯು ಒಂದು ವರ್ಷದಾಗಿದ್ದು ಊಟವನ್ನು ತಮ್ಮ ಖರ್ಚಿನಲ್ಲಿ ಸಿದ್ದಪಡಿಸಿ ವಿಶ್ವವಿದ್ಯಾಲಯದ ವಸತಿನಿಲಯಗಳ ಊಟದ ಕೋಣೆಗೆ ತಲುಪಿಸುವ ಬಡಿಸುವ ವ್ಯವಸ್ಥೆ ಮಾಡಲು ಬದ್ದರಾಗಿರಬೇಕು.
5. ಎಲ್ಲಾ ವಸತಿ ನಿಲಯಗಳಲ್ಲಿ ಅಡುಗೆ ಸಾಮಗ್ರಿಗಳನ್ನು ಪರಿಪಾಲಕರಿಂದ ತೆಗೆದುಕೊಂಡು ತಮ್ಮ ಟೆಂಡರ ಮುಗಿನ ಮೇಲೆ ಯಥಾಸ್ಥಿತಿ ಪರಿಪಾಲಕರಿಗೆ ಒಪ್ಪಿಸಲು ಕೋರಲಾಗಿದೆ. ಹೆಚ್ಚಿನ ಸಾಮಗ್ರಿಗಳು ಬೇಕಾದಲ್ಲಿ ತಾವೇ ಖರೀದಿಸಬೇಕು.
6. ಸಾಮಾನ್ಯ ವಿದ್ಯಾರ್ಥಿಗಳ ಊಟದ ವೆಚ್ಚವನ್ನು ಪ್ರತಿ ತಿಂಗಳು ಸಂಬಂಧಪಟ್ಟ ಟೆಂಡರದಾರರು ವಿದ್ಯಾರ್ಥಿಗಳಿಂದ ಚಾಲನ ಮೂಲಕ ಜಮಾಮಾಡಿಕೊಂಡು ಉಪಕುಲಸಚಿವರ ಅನುಮತಿ ಮೇರೆಗೆ ಹಣ ಡ್ರಾ ಮಾಡಿ ಊಟದ ವ್ಯವಸ್ಥೆ ಮಾಡಲು ಟೆಂಡರು ದಾರರಿಗೆ ವಹಿಸಿಕೊಡಲಾಗಿದೆ. ಪಜಾ/ಪಪಂ ವಿದ್ಯರ್ಥಿಗಳ ಬಿಲ್ಲನ್ನು ಮಾತ್ರ ನಮ್ಮಿಂದ (ಪಜಾ/ಪಪಂ ಘಟಕ) ಪಾವತಿಸಲಾಗುತ್ತದೆ.
7. **ಠೇವಣಿ (E.M.D.) ರೂ.2.00,000/– (ರೂಪಾಯಿ ಎರಡು ಲಕ್ಷ ಮಾತ್ರ)** ಡಿ.ಡಿ.ಸಲ್ಲಿಸಬೇಕು. ಡಿ.ಡಿ. ಸಲ್ಲಿಸದಿರುವ ಟೆಂಡರಗಳನ್ನು ತಿರಸ್ಕರಿಸಲಾಗುವುದು. ಅದಕ್ಕೆ ಯಾವುದೆ ಪತ್ರವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
8. ಟೆಂಡರ ಸ್ವೀಕೃತಗೊಂಡ ನಂತರ ಯಾವುದೇ ಕಾರಣಕ್ಕೆ ಊಟದ ಸರಬರಾಜು ಸ್ಥಗಿತಗೊಳಿಸಿದಲ್ಲಿ ಠೇವಣಿ ಹಣ ಹಿಂದಿರುಗಿಸುವುದಿಲ್ಲ.
9. ರೂ.15000/– ಕಿಂತಲೂ ಕಡಿಮೆ ದರದಲ್ಲಿ ಸರಬರಾಜು ಮಾಡುವವರಿಗೆ ಆದ್ಯತೆ ನೀಡಲಾಗುತ್ತದೆ.
10. **ಟೆಂಡರ ಸ್ವೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ವಿಶ್ವವಿದ್ಯಾಲಯವು ಕಾಯ್ದಿರಿಸಿಕೊಂಡಿದೆ.**
    1. ಊಟದ ಸರಬರಾಜು ಮಾಡಲು ಪಡೆದ ಪರವಾನಿಗೆ ಪ್ರಮಾಣ ಪತ್ರ ಸಲ್ಲಿಸಬೇಕು.
    2. TIN ನಂ. ಹೊಂದಿರಬೇಕು.
    3. ರೂ.1,00,000/– ವಹಿವಾಟು ಮಾಡಿದ ಬಗ್ಗೆ Balance Sheet ಹೊಂದಿರಬೇಕು.
    4. 5 ವರ್ಷ ಉನ್ನತ ಶಿಕ್ಷಣ ಸಂಸ್ಥೆ/ವಸತಿನಿಲಯಗಳಿಗೆ ಊಟದ ಸರಬರಾಜು ಮಾಡುವ ಬಗ್ಗೆ ಅನುಭವ ಪುರಾವೆಗಳು ಹೊಂದಿರಬೇಕು.
    5. ಊಟದ ಗೃಹದ ಸಂಖ್ಯೆ ಕಡ್ಡಾಯವಾಗಿ ಹೊಂದಿರಬೇಕು. ಮತ್ತು ಅದಕ್ಕೆ ಸಂಬಂಧಿಸಿದ ದಾಖಲೆ ಲಗತ್ತಿಸಬೇಕು.
    6. ಊಟದ ಗೃಹದ ಟ್ಯಾಕ್ಸ್ ಪೇಡ್ ರಿಶೀದಿ ಲಗತ್ತಿಸಬೇಕು.
    7. ಅಡಿಗೆ ಕಲಸಗಾರಾರಿಂದ ತೆಗೆದುಕೊಂಡು ಅವರಿಗೆ ಪ್ರತಿತಿಂಗಳು ಸಂಬಳ ತಾವೇ ಭರಿಸಬೇಕು.
    8. ಹೆಣ್ಣುಮಕ್ಕಳ ವಸತಿನಿಲಯಲಗಳಿಗೆ ಊಟ ವ್ಯವಸ್ಥೆ ಮಾಡಲು ಮಹಿಳಾ ಸಂಘಸಂಸ್ಥೆಗಳಿಗೆ ಆಧ್ಯತೆ ನೀಡಲಾಗುತ್ತದೆ.

ಮೇಲಿನ ಎಲ್ಲಾ ಕರಾರುಗಳಿಗೆ ಒಪ್ಪಿಕೊಂಡು ಊಟ ಸರಬರಾಜು ಮಾಡುವ ಆಸಕ್ತರು ಅರ್ಜಿ ಹಾಕಬಹುದು.

20/12/14

ಕುಲಸಚಿವರು
ಗುಲಬರ್ಗಾ ವಿಶ್ವವಿದ್ಯಾಲಯ, ಗುಲಬರ್ಗಾ

20/7/2012